**ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ**
**ಮುಧೋಳ.**

**ಸಿ.ಸಿ.ನಂ.1115/2024**

1 ) ಸರ್ಕಾರದ ಪರವಾಗಿ ಮುಧೋಳ ಪೋ.ಠಾಣೆ

- - - ಪಿರ್ಯಾದಿ.

**- ವಿರುದ್ದ -**

A1) ಸಂತೋಷ ಪಶುಪತಿ ಪಾಟೀಲ, ವಯಾಃ 35 ವರ್ಷ
ಸಾಃ ನಿಚ್ಚುನಗಿ ಗ್ರಾಮ, ತಾಃ ಕಿತ್ತೂರ, ಜಿಲ್ಲಾ ಃ ಬೆಳಗಾವಿ.

- - ಆರೋಪಿ

=====

**:ಆ ರೋ ಪ ಣೆ: :**

ದಿನಾಂಕ 29-05-2024 ರಂದು ಮಧ್ಯಾಹ್ನ 4-35 ಗಂಟೆ ಸುಮಾರಿಗೆ ಮುಧೋಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮುಧೋಳ-ಮಂಟೂರ ರಸ್ತೆಯ ಬಾಯಪಾಸ್ ರಸ್ತೆ ಕ್ರಾಸದ ವೃತ್ತದಲ್ಲಿ ನಾಲ್ಕು ಕೂಡುವ ರಸ್ತೆಯ ಮೂಲಕ ವಾಹನಗಳು ಕ್ರಾಸವಾಗುತ್ತವೆ ನಿಧಾನವಾಗಿ ಚಲಿಸಬೇಕು ಎಂಬುವುದನ್ನು ಗಮನದಲ್ಲಿಟ್ಟುಕೊಳ್ಳದೆ 1 ನೇ ಆರೋಪಿತನಾದ ನೀನು ಟಾಟಾ ಕಂಪನಿಯ ಲಾರಿ ನಂ.ಕೆಎ-22/ಬಿ-0442 ನೇದ್ದನ್ನು ಲೋಕಾಪುರ ಕಡೆಯಿಂದ ಜಮಖಂಡಿ ಕಡೆಗೆ ಅತೀ ಜೋರಾಗಿ ಮತ್ತು ನಿಷ್ಕಾಳಜಿತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು 2 ನೇ ಆರೋಪಿಯು ಮೋಟಾರ ಸೈಕಲ ನಂ.ಕೆಎ-48/ಜಿ-2728 ನೇದ್ದನ್ನು ಚಲಾಯಿಸಿಕೊಂಡು ಮಂಟೂರದಿಂದ ಮುಧೋಳ ಕಡೆಗೆ ರಸ್ತೆಯನ್ನು ಕ್ರಾಸ ಮಾಡಿಕೊಂಡು ಹೋರಟಾಗ ಸದರಿ ಮೋಟಾರ ಸೈಕಲಗೆ ಹಾಯಿಸಿ ಅಪಘಾತಪಡಿಸಿ, ಆ ಮೂಲಕ ಆರೋಪಿತನಾದ ನೀನು **ಭಾ.ದಂ.ಸಂ.ಕಲಂ.279 ಐ.ಪಿ.ಸಿ ಕಾಯ್ದೆ** ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3) ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ವೇಳೆಯಲ್ಲಿ, 1 ನೇ ಆರೋಪಿತನಾದ ನೀನು ಈ ಮೇಲೆ ನಮೂದಿಸಿದ ರೀತಿಯಲ್ಲಿ ನೀನು ನಿನ್ನ ಲಾರಿಯನ್ನು 2 ನೇ ಆರೋಪಿಯು ಚಲಾಯಿಸಿಕೊಂಡು ಹೋರಟಿದ್ದ ಮೋಟಾರ ಸೈಕಲಗೆ ಹಾಯಿಸಿ ಅಪಘಾತಪಡಿಸಿದ್ದರಿಂದ ಸದರಿ 2 ನೇ ಆರೋಪಿಗೆ ಹಿಂದಲೆಗೆ, ಎಡಗಡೆ ತಲೆಗೆ ಮತ್ತು ದೇಹದ ಇತರ ಭಾಗಗಳಿಗೆ ಭಾರಿ ಸ್ವರೂಪದ ಹಾಗೂ ಸಾಧಾ ಸ್ವರೂಪದ ಗಾಯಗಳು ಆಗಿ ಬಾಗಲಕೋಟೆಯ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಉಪಚಾರ ಫಲಿಸದೆ ಅವನು ತೀರಿಕೊಂಡಿರುತ್ತಾನೆ, ಆ ಮೂಲಕ ನೀನು **ಭಾ.ದಂ.ಸಂ.ಕಲಂ.304(ಎ) ಐ.ಪಿ.ಸಿ ಕಾಯ್ದೆ** ಮೇರೆಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆಃ1. ಸದರಿ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ?
ಉತ್ತರಃ ಹೌದು.

ಪ್ರಶ್ನೆಃ 2.    ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಇಲ್ಲವೇ ವಿಚಾರಣೆಯಾಗಬೇಕೋ?
ಉತ್ತರಃ  ಸುಳ್ಳು ವಿಚಾರಣೆಯಾಗಬೇಕು.

**(ಆರೋಪಿಗೆ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ತಿಳಿದುಕೊಂಡು ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು.)**

ಓ ಹೇ ಕೇ ಸರಿ ಇದೆ.

Sd/-
ದಿನಾಂಕಃ 23-03-2026.    ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕರಿಗಳು,
ಮುಧೋಳ.

**<u>ಆರೋಪಿತನ ಸಹಿಃ</u>**

A1)   ಸಂತೋಷ ಪಶುಪತಿ ಪಾಟೀಲ.

***